ಕರ್ನಾಟಕ ಸರ್ಕಾರ

ನವೆಂಬರ್ 7, 2016

# ಹಿರಿಯ ಪತ್ರಕರ್ತ ಗಿರೀಶ್ ನಿಕ್ಕಂ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ನವೆಂಬರ್ 7:

ಹಿರಿಯ ಪತ್ರಕರ್ತ ಗಿರೀಶ್ ನಿಕ್ಕಂ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಶಾರದಾ ವಿಲಾಸ ಪ್ರೌಢ ಶಾಲೆಯಲ್ಲಿ ಶಾಲಾ ಶಿಕ್ಷಣ ಪಡೆದು, ಮಹಾರಾಜ ಕಾಲೇಜಿನಲ್ಲಿ ಪದವಿ ಹಾಗೂ ದೆಹಲಿಯಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿದಾರರ ರಕ್ಷಣೆಯ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ಗಿರೀಶ್ ನಿಕ್ಕಂ ಅವರು ಪತ್ರಿಕೋದ್ಯಮಕ್ಕೆ ಪಾದಾರ್ಪಣೆ ಮಾಡಿದ್ದು ಆಕಸ್ಮಿಕವೇನಲ್ಲ.

ಮೊದಲಿನಿಂದಲೂ ಬರವಣಿಗೆಯ ಮೇಲೆ ಪ್ರೀತಿ ಇದ್ದ ಗಿರೀಶ್ ನಿಕ್ಕಂ ಅವರು ಮೈಸೂರಿನ ಸ್ಟಾರ್ ಆಫ್ ಮೈಸೂರು ಪತ್ರಿಕೆಯಲ್ಲಿ ವೃತ್ತಿಯನ್ನು ಪ್ರಾರಂಭಿಸಿ, ಇಂಡಿಯನ್ ಎಕ್ಸ್‌ಪ್ರೆಸ್, ಇಂಡಿಯಾ ಟುಡೇ, ಈ ಟಿವಿ ಸಮೂಹ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ತನಿಖಾ ಪತ್ರಿಕೋದ್ಯಮಕ್ಕೆ ಹೊಸ ಭಾಷ್ಯ ಬರೆದು ಪ್ರತಿಭಾವಂತ ಪತ್ರಕರ್ತರಾಗಿ ರಾಷ್ಟ್ರದ ಪತ್ರಿಕೋದ್ಯಮದಲ್ಲಿ ಸ್ಟಾರ್ ಆಫ್ ಇಂಡಿಯಾ ಎಂದೆನಿಸಿ ಎಲ್ಲರ ಗಮನ ಸೆಳೆದದ್ದು ಇದೀಗ ಇತಿಹಾಸ.

ರಾಷ್ಟ್ರದ ರಾಜಧಾನಿಯಲ್ಲಿದ್ದ ಸಾವಿರಾರು ಪತ್ರಕರ್ತರಲ್ಲಿ ಸೂರ್ಯನಡಿಯ ಎಲ್ಲಾ ವಿಷಯಗಳನ್ನೂ ಅಧಿಕಾರವತ್ತಾಗಿ ಮಾತನಾಡಬಲ್ಲ, ವಿಶೇಷವಾಗಿ ಅತ್ಯದ್ಭುತವಾಗಿ ರಾಜಕೀಯ ವಿಶ್ಲೇಷಣೆ ಮಾಡಬಲ್ಲ, ಬೆರಳೆಣಿಕೆಯಷ್ಟು ಪತ್ರಕರ್ತರಲ್ಲಿ ಗಿರೀಶ್ ನಿಕ್ಕಂ ಅವರು ಒಬ್ಬರಾಗಿದ್ದರು.

ಪತ್ರಿಕೋದ್ಯಮದಲ್ಲಿ ನೇರ ಮಾತು – ನಿಷ್ಠೂರ ಬರವಣಿಗೆ ಗಿರೀಶ್ ಅವರ ಗಮನಾರ್ಹ ಶೈಲಿಯಾಗಿತ್ತು ರಾಜ್ಯಸಭಾ ಟಿ ವಿ ಯಲ್ಲಿ ನಿರೂಪಕರಾಗಿಯೂ ಸೇವೆ ಸಲ್ಲಿಸಿದ ಗಿರೀಶ್ ನಿಕ್ಕಂ ಅವರು

ಈ ದಿನ ಸಂಜೆ ತಾವು ಸಾಯುವ ಮುನ್ನವೂ, ಕಾರ್ಯಕ್ರಮವನ್ನು ನಿರೂಪಿಸಿ ತಮ್ಮ ಕರ್ತವ್ಯವನ್ನು ಮುಗಿಸಿದ ನಂತರ ಹೃದಯಾಘಾತಕ್ಕೆ ಒಳಗಾಗಿ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿಯೇ ಇಹಲೋಕ ತ್ಯಜಿಸಿದರು ಎಂಬುದು ನನ್ನಲ್ಲಿ ಆಘಾತವನ್ನು ಉಂಟು ಮಾಡಿದೆ.

ನನ್ನ ದೆಹಲಿ ಭೇಟಿಯ ಸಂದರ್ಭದಲ್ಲಿ ಸದಾ ಕಾಲ ತಮ್ಮ ಎಳೆ ನಗೆ ಬೀರುತ್ತಾ ವರದಿಗಾಗಿ ಪತ್ರಿಕಾ ಗೋಷ್ಠಿಗಳಿಗೆ ಹಾಜರಾಗುತ್ತಿದ್ದ ಗಿರೀಶ್ ನಿಕ್ಕಂ ಇನ್ನಿಲ್ಲ ಎಂಬುದು ನನ್ನಲ್ಲಿ ಅತೀವ ದುಃಖ ಹಾಗೂ ನೋವನ್ನು ಉಂಟು ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*******

ಡಿ ಪಿ ಎಂ